ಸಾಧ್ಯವಿದೆ. ಕೆಲವು ಸಂದರ್ಭಗಳಲ್ಲಿ ಮಾನಸಿಕ ಹಲ್ಲೆ ದೈಹಿಕ ದೌರ್ಜನ್ಯಕ್ಕಿಂತಲೂ ಭೀಕರವಾಗಿರುತ್ತದೆ.

ವರ್ತಮಾನದ ಹಿಂಸಾತ್ಮಕ ವಿದ್ಯಮಾನಗಳನ್ನು ಗಮನಿಸಿದಾಗ – ಮನುಷ್ಯ ಯಾಕಿಷ್ಟು ಕ್ರೂರಿಯಾಗುತ್ತಿದ್ದಾನೆ, ಯಾಕೆ ಹಿಂಸ್ರಪಶುವಿನಂತೆ ವರ್ತಿಸುತ್ತಿದ್ದಾನೆ ಎನ್ನುವ ಪ್ರಶ್ನೆಗಳು ಸಹಜವಾಗಿಯೇ ಎದುರಾಗುತ್ತವೆ. ಈ ಪ್ರಶ್ನೆಗಳಿಗೆ ಉತ್ತರರೂಪದಲ್ಲಿ ಮುಖ್ಯವಾಗಿ ಐದು ಕಾರಣಗಳನ್ನು ಗುರ್ತಿಸಬಹುದು. ಅವುಗಳೆಂದರೆ:

1. ಮೌಲ್ಯ ವ್ಯವಸ್ಥೆಯಲ್ಲಿ ಆಗಿರುವ ಪಲ್ಲಟಗಳು.
2. ಧರ್ಮ ಮತ್ತು ರಾಜಕೀಯ ವಿದ್ಯಮಾನಗಳ ಪ್ರಭಾವ.
3. ತಂತ್ರಜ್ಞಾನದ ಅತಿ ಅವಲಂಬನೆ, ವ್ಯಸನ.
4. ಶಿಕ್ಷಣ ಕ್ಷೇತ್ರದ ವೈಫಲ್ಯ.
5. ಮಾಧ್ಯಮಗಳ ದುಷ್ಪರಿಣಾಮ.

## ಮೌಲ್ಯ ವ್ಯವಸ್ಥೆಯ ಸವಕಳಿ


ನಾಗರಿಕತೆಯ ಪ್ರಮುಖ ಲಕ್ಷಣವೇ ನಮ್ಮ ಬದುಕಿಗೆ ಮೌಲ್ಯಗಳನ್ನು ಜೋಡಿಸುವುದು. ಈ ಮೌಲ್ಯಗಳು ಕುಟುಂಬಕ್ಕೆ ಸಂಬಂಧಿಸಿದ್ದಾಗಿರುವಂತೆಯೇ, ಸಮಾಜದೊಂದಿಗಿನ ನಮ್ಮ ಬದುಕಿಗೆ ಅನ್ವಯಿಸುವಂತಹವೂ ಆಗಿರುತ್ತವೆ.

ಸಮಾಜಕ್ಕೆ ಹಾಗೂ ಪರಿಸರಕ್ಕೆ ಆದಷ್ಟೂ ಹಾನಿಯಾಗದಿರುವಂತೆ ಬದುಕುವುದನ್ನು ಜೀವನದ ಉದ್ದೇಶವಾಗಿ ನಮ್ಮ ಪರಂಪರೆ ಗುರ್ತಿಸಿದೆ. ಈ ಉದ್ದೇಶದಲ್ಲಿ ಆಗಿರುವ ಬದಲಾವಣೆಯೇ ಇಂದಿನ ಬಹುತೇಕ ಅನರ್ಥಗಳಿಗೆ ಮೂಲ ಇರುವಂತಿದೆ. ಬದುಕಿನ ಉದ್ದೇಶ ಈಗ ಭೋಗವಾಗಿದೆ. ಆ ಭೋಗ ವಿಕೃತಿಯ ರೂಪ ಪಡೆದುಕೊಳ್ಳುತ್ತಿದೆ. ಆಧುನಿಕತೆ, ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದ ಉತ್ಕರ್ಷ ನಮ್ಮ ಬದುಕನ್ನು ಹಸನಾಗಿಸಿದೆಯಾದರೂ, ಭೋಗದ ಕುರಿತ ವಾಂಛೆಯನ್ನೂ ಹೆಚ್ಚಿಸಿವೆ. ಸುಖದ ಹುಡುಕಾಟದಲ್ಲಿ ಮನುಷ್ಯ ಎಷ್ಟು ಸ್ವಕೇಂದ್ರಿತನಾಗಿದ್ದಾನೆಂದರೆ, ಸಹಾನುಭೂತಿ, ಅನುಕಂಪದಂಥ ಗುಣಗಳನ್ನೇ ಕಳೆದುಕೊಂಡು ಕ್ರೌರ್ಯ ಆವಾಹಿಸಿಕೊಳ್ಳುತ್ತಿದ್ದಾನೆ. ಸುಖಕ್ಕಾಗಿ ಏನನ್ನಾದರೂ ಮಾಡಬಹುದೆನ್ನುವ ಮನೋಭಾವ ಹಿಂಸೆ–ಕ್ರೌರ್ಯದತ್ತ ವ್ಯಕ್ತಿಯನ್ನು ಕರೆದೊಯ್ಯುತ್ತದೆ.

ಕೂಡು ಕುಟುಂಬಗಳು ವಿರಳವಾಗುತ್ತಿರುವುದು ಕೂಡ ಮನುಷ್ಯನ ಸ್ವಾರ್ಥದ ರೂಪದಲ್ಲೇ ನೋಡಬೇಕು. ಕುಟುಂಬದ ಚೌಕಟ್ಟು ಸಣ್ಣದಾಗುತ್ತಾ ಹೋಗುತ್ತಿದೆ. ಆ ಚೌಕಟ್ಟಿನಲ್ಲೀಗ ತಂದೆ–ತಾಯಿಗೆ ಕೂಡ ಅವಕಾಶವಿಲ್ಲ ಎನ್ನುವ ಸ್ಥಿತಿಯೂ ರೂಪುಗೊಳ್ಳುತ್ತಿದೆ. ಕೂಡು ಕುಟುಂಬದಲ್ಲಿ ದೊರೆಯುತ್ತಿದ್ದ ಸುರಕ್ಷತೆ ಹಾಗೂ ಪ್ರೀತಿಪ್ರೇಮದ ಆರ್ದ್ರತೆ ಸಣ್ಣ ಕುಟುಂಬದಲ್ಲಿ ಕಡಿಮೆಯಾಗುವುದರ ಜೊತೆಗೆ, ಕುಟುಂಬ ನಿರ್ವಹಣೆಯ ಒತ್ತಡವೂ ಹೆಚ್ಚತೊಡಗುತ್ತದೆ. ಹಿರಿಯರ ಜೀವನ ಅನುಭವದ ಲಾಭವೂ ಇಂಥ ಕುಟುಂಬಗಳಿಗೆ ಇಲ್ಲವಾಗುತ್ತದೆ.

## ಧರ್ಮ-ರಾಜಕೀಯ ಪ್ರಭಾವ

ಮನುಷ್ಯನ ಬದುಕು ಒಂದಲ್ಲಾ ಒಂದು ಬಗೆಯಲ್ಲಿ ಧರ್ಮ ಮತ್ತು ರಾಜಕೀಯದ ನಿಯಂತ್ರಣಕ್ಕೆ ಒಳಗಾಗಿದೆ. ಧರ್ಮ ಮತ್ತು ರಾಜಕೀಯ ಎರಡರ ಉದ್ದೇಶವೂ ವ್ಯಕ್ತಿ ಹಾಗೂ ಸಮಷ್ಟಿಯ ಬದುಕನ್ನು ಸಹನೀಯಗೊಳಿಸುವುದೇ ಆಗಿದೆ. ಧರ್ಮವು ವ್ಯಕ್ತಿ ಹಾಗೂ ಸಮಾಜದ ಆರೋಗ್ಯಕ್ಕೆ ಅಗತ್ಯವಾದ ನೈತಿಕ ತಳಹದಿಯನ್ನು ರೂಪಿಸುವ ಕೆಲಸ ಮಾಡಿದರೆ, ವ್ಯಕ್ತಿ–ಸಮಾಜದ ಭೌತಿಕ ಬದುಕಿನ ಅಗತ್ಯಗಳನ್ನು ಪೂರೈಸುವ ಹಾಗೂ ಸಮಾಜದ ಚಟುವಟಿಕೆಗಳಿಗೆ ಸುಸಂಗತ ವ್ಯವಸ್ಥೆಯೊಂದನ್ನು ನಿರ್ವಹಿಸುವ ಕೆಲಸವನ್ನು ರಾಜಕೀಯ ಮಾಡುತ್ತಿರುತ್ತದೆ. ಭಿನ್ನ ಪಾತಳಿಗಳಲ್ಲಿ ಕೆಲಸ ಮಾಡುವ ಈ ಎರಡು ಸಂಸ್ಥೆಗಳು ಈಗ ತಮ್ಮ ನಡುವಿನ ಗೆರೆ ಅಳಿಸಿಕೊಂಡು, ಅಧಿಕಾರ ಕೇಂದ್ರಗಳಾಗಿ ಬದಲಾಗಿವೆ.



ಗೋಡೆಗಳು ಹೆಚ್ಚಾದಂತೆಲ್ಲ ಸಂಬಂಧದ ಕಾವು ಮತ್ತು ಬೆಳಕು ಎರಡೂ ದುರ್ಬಲಗೊಳ್ಳುತ್ತವೆ.

ಧರ್ಮ ಸಾಂಸ್ಥೀಕರಣಗೊಂಡು, ಅಧಿಕಾರದ ಕೇಂದ್ರಗಳೂ ಆಗಿವೆ. ರಾಜಕೀಯವೆನ್ನುವುದು ಜನರ ಸೇವೆಯ ಉದ್ದೇಶದಿಂದ ದೂರವಾಗತೊಡಗಿ ಅಧಿಕಾರ ಚಲಾವಣೆಯ ಸ್ವರೂಪ ಪಡೆದುಕೊಂಡಿದೆ. ಈ ಬದಲಾವಣೆ ಎರಡೂ ಸಂಸ್ಥೆಗಳನ್ನು ಅವುಗಳ ಮೂಲಭೂತ ಉದ್ದೇಶಗಳಿಂದ ದೂರವಾಗಿಸುತ್ತ, ಭ್ರಷ್ಟಗೊಳಿಸುತ್ತಿವೆ. ಇದರ ಪರಿಣಾಮ ವ್ಯಕ್ತಿಯ ಮೇಲೂ ಆಗುತ್ತಿದೆ. ಸಮಾಜದ ಸೌಹಾರ್ದಕ್ಕೆ ಪೂರಕವಾಗಬೇಕಿದ್ದ ಧರ್ಮ ಮತ್ತು ರಾಜಕೀಯ ವಿಭಜನೆಗೆ ಕಾರಣವಾಗುತ್ತಿದೆ. ಈ ವಿಭಜಕ ಮನಸ್ಥಿತಿ ವ್ಯಕ್ತಿಯ ಮಾನಸಿಕ ಕ್ಷೋಭೆಗೆ ಕಾರಣವಾಗುತ್ತಿದೆ.

## ತಂತ್ರಜ್ಞಾನದ ವ್ಯಸನ

ಅಂಗೈಗೆ ಜಗತ್ತನ್ನು ತಂದಿರಿಸಿರುವ ಮೊಬೈಲ್ ಫೋನ್‌ಗಳು ಅದೇ ಕಾಲಘಟ್ಟಕ್ಕೆ ನಮ್ಮನ್ನು ನಮ್ಮ ಭಾವಕೋಶದ ಜಗತ್ತಿನಿಂದ ದೂರವಿರಿಸುವ ಪ್ರಯತ್ನವನ್ನೂ ಮಾಡುತ್ತಿವೆ. ವ್ಯಕ್ತಿಯೊಬ್ಬ ತನ್ನ ಮನೆಮಂದಿ ಅಥವಾ ಸ್ನೇಹಿತರಿಗಿಂತಲೂ ಹೆಚ್ಚಿನ ಸಮಯವನ್ನು ತನ್ನ ಸ್ಮಾರ್ಟ್‌ಫೋನ್‌ನೊಂದಿಗೆ ಕಳೆಯುತ್ತಿರುವ ದಿನಗಳಿವು. ವಯೋಮಾನದ ವ್ಯತ್ಯಾಸವಿಲ್ಲದೆ ಹಾಗೂ ಲಿಂಗಭೇದವಿಲ್ಲದೆ ಮೊಬೈಲ್ ಫೋನ್ ಸರ್ವವ್ಯಾಪಿಯಾಗಿದೆ; ಸಂವಹನದ ದೃಷ್ಟಿಯಿಂದ ಅಪರಿಮಿತ ಸಾಧ್ಯತೆಗಳನ್ನು ನಮ್ಮೆದುರು ತೆರೆದಿಟ್ಟಿದೆ. ಆದರೆ, ಅದೇ ಕಾಲಕ್ಕೆ ವ್ಯಕ್ತಿಯ ಒಂಟಿತನಕ್ಕೆ, ಖಿನ್ನತೆಗೆ ಕಾರಣವಾಗುತ್ತಿದೆ. ಕುಟುಂಬ ಹಾಗೂ ನೆರೆಹೊರೆಯ ಸಾಮಾಜಿಕ ಸಂಬಂಧಗಳನ್ನು ದುರ್ಬಲಗೊಳಿಸಿಕೊಳ್ಳುತ್ತಿರುವ ವ್ಯಕ್ತಿ, ಸಾಮಾಜಿಕ ಜಾಲತಾಣಗಳಲ್ಲಿ ಸ್ನೇಹ–ಸಂಬಂಧಗಳನ್ನು ಹುಡುಕತೊಡಗಿದ್ದಾನೆ. ಡಿಜಿಟಲ್ ಜಗತ್ತಿನ ಸಖ್ಯದಲ್ಲಿ ವಾಸ್ತವಕ್ಕೂ ಭ್ರಾಮಕಲೋಕಕ್ಕೂ ಇರುವ ವ್ಯತ್ಯಾಸವನ್ನು ಗುರ್ತಿಸಲಾಗದಿರುವ ಪರಿಸ್ಥಿತಿ ಎದುರಾಗುತ್ತದೆ. ಇದರ ಫಲವನ್ನು ವಿವರಿಸುವ ಅಗತ್ಯವಿಲ್ಲವಷ್ಟೇ?

ಸಾಮಾಜಿಕ ಜಾಲತಾಣಗಳು ಸಾರ್ವಜನಿಕರ ಪಾಲಿಗೆ ಯುದ್ಧಕೇಂದ್ರಗಳಾಗಿವೆ. ಖಾಸಗಿತನದ ರಕ್ಷಣೆ ಸಾಧ್ಯವಿರುವುದರಿಂದ ದಾಳಿಕೋರ ಭಾಷೆಯ ಬಳಕೆ, ನಿಂದನೆ ಹೆಚ್ಚಾಗಿದೆ. ಇದೆಲ್ಲದರ ಪಯಣ ಕೊನೆಗೊಳ್ಳುವುದು ಹಿಂಸೆ–ಕ್ರೌರ್ಯದ ನಿಲ್ದಾಣಕ್ಕೆ.

## ಶಿಕ್ಷಣದ ಅಪಮೌಲ್ಯ

ವರ್ತಮಾನದ ಬಹುತೇಕ ಸಮಸ್ಯೆಗಳಿಗೆ ಶಿಕ್ಷಣ ಕ್ಷೇತ್ರದಲ್ಲಿನ ಅಪಮೌಲ್ಯೀಕರಣವೇ ಕಾರಣವಾಗಿದೆ. ಶಿಕ್ಷಣದ ಪ್ರಮುಖ ಉದ್ದೇಶ ಮನೋವಿಕಾಸ ಹಾಗೂ ಸದೃಢ ವ್ಯಕ್ತಿತ್ವದ ನಿರ್ಮಾಣ. ಬದುಕನ್ನು ಎದುರಿಸಲುಬೇಕಾದ ಮಾನಸಿಕ ಹಾಗೂ ಕುಶಲಕಲೆಯ ಸಾಮರ್ಥ್ಯವನ್ನು ದೊರಕಿಸುವುದು ಶಿಕ್ಷಣದ ಉದ್ದೇಶ. ದುರದೃಷ್ಟವಶಾತ್, ಈ